**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ|| ತಳವಾರ್ ಸಾಬಣ್ಣ ಇವರು ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**<u>ವಿಷಯ:</u>**

**ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ ಪದ್ಧತಿಯು ಸಾವಿರಾರು ವರ್ಷಗಳಿಂದ ಅನುಸರಿಸುತ್ತಾ ಬಂದಿದ್ದು, ಈವತ್ತಿನವರೆಗೆ ನಮ್ಮ ಸಮಾಜದ ಅವಿಭಾಜ್ಯ ಅಂಗವಾಗಿ ಉಳಿದಿದೆ. ಇತಿಹಾಸಕಾರರ ಪ್ರಕಾರ ಜಾತಿ ಪದ್ಧತಿಯು ಕಸುಬುಗಳ ಆಧಾರವಾಗಿದ್ದು, ಈ ಕಸುಬುಗಳೇ ಆಯಾ ಜಾತಿಯ ಸಾಮಾಜಿಕ ಮತ್ತು ಆರ್ಥಿಕ ಜೀವನ ಪದ್ಧತಿ ಮತ್ತು ಸ್ಥಿತಿಯನ್ನು ನಿರ್ಧರಿಸುತ್ತದೆ. ಹೀಗಾಗಿ, ಜಾತಿ ಆಧಾರಿತ ಕಸುಬುಗಳಿಗೆ ಕುಲ ಕಸುಬುಗಳೆಂದು ಕರೆಯುವರು.**

ಈ ಕುಲ ಕಸುಬುಗಳನ್ನು ನೂರಾರು-ಸಾವಿರಾರು ವರ್ಷಗಳಿಂದ ಜೀವಂತವಾಗಿ ಸಾವಿರಾರು ಕುಟುಂಬಗಳು ಉಳಿಸಿಕೊಂಡು ಬಂದಿವೆ. ಹಾಗೆಯೇ ಈ ಕುಟುಂಬಗಳ ಆರ್ಥಿಕ ಸ್ಥಿತಿ-ಗತಿಯನ್ನು ಈ ಕುಲ ಕಸುಬುಗಳ ಮೇಲೆ ಅವಲಂಬಿಸಿದೆ ಆದರೆ, ಈ ಆಧುನಿಕ ಸಮಾಜದಲ್ಲಿ ತಾಂತ್ರಿಕತೆ ಬೆಳದಂತೆ ಮಾರುಕಟ್ಟೆಯಲ್ಲಿ ವಸ್ತುಗಳ ಬೇಡಿಕೆ-ಪೂರೈಕೆಯಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಈ ವ್ಯತ್ಯಾಸಗಳು ನೇರವಾಗಿ ಕುಲ ಕಸುಬುಗಳು ಅವಲಂಬಿಸಿರುವ ಸಾವಿರಾರು ಕುಟುಂಬಗಳ ಮೇಲೆ ಪರಿಣಾಮ ಬೀರುತ್ತವೆ. ಇದರ ಪರಿಣಾಮವೆ ಕುಲ ಕಸುಬುಗಳಿಂದ ಉತ್ಪಾದಿಸುವ ವಸ್ತುಗಳ ಬೇಡಿಕೆಯಲ್ಲಿ ಸಂಪೂರ್ಣವಾಗಿ ಕುಂಠಿತಗೊಂಡು ಜಾತಿ ಆಧಾರಿತ ಕುಲ ಕಸುಬುಗಳನ್ನು ನೆಚ್ಚಿಕೊಂಡಿರುವ ಹಿಂದುಳಿದ ವರ್ಗಗಳ ಹಲವಾರು ಕುಟುಂಬಗಳು ಇಂದು ಬೀದಿ ಪಾಲಾಗಿವೆ. ಈ ರೀತಿ ಸಾರ್ವಜನಿಕ ಕುಲ ಕಸುಬುಗಳ ಆಧಾರಿತ ಹಿಂದುಳಿದ ವರ್ಗಗಳ ಬೆಂಬಲಕ್ಕೆ ಮತ್ತು ಕುಲ ಕಸುಬುಗಳನ್ನು ಪ್ರೋತ್ಸಾಹಿಸಿ ಬೆಳೆಸುವ ಕುರಿತು ನಿಯಮ 330ರ ಮೇರೆಗೆ ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**<u>ಉತ್ತರ:</u>**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಅಭಿವೃದ್ಧಿ ನಿಗಮಗಳಲ್ಲಿ ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಸೇರಿದ ಜಾತಿಗಳಿಗೆ ಸಂಬಂಧಿಸಿದಂತೆ, ಆಯಾ ಜಾತಿಗಳ ವೃತ್ತಿಯಾಧಾರಿತ ಕುಲಕಸುಬುಗಳಿಗೆ ಪ್ರೋತ್ಸಾಹ ನೀಡಲು ಕೆಲವು ನಿಗಮಗಳಿಂದ ವಿವಿಧ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಇವುಗಳಲ್ಲಿ ಮುಖ್ಯವಾಗಿ ವಿಶ್ವಕರ್ಮ ಜನಾಂಗಕ್ಕೆ ಪಂಚವೃತ್ತಿ ಯೋಜನೆ, ಮರಾಠ ಜನಾಂಗಕ್ಕೆ ಮಿಲ್ಟ್ರಿ ಹೋಟೇಲ್, ಲಿಂಗಾಯತ ಜನಾಂಗಕ್ಕೆ ವಿಭೂತಿ ಘಟಕ ನಿರ್ಮಾಣಕ್ಕಾಗಿ ಪ್ರತ್ಯೇಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ ನಿಗಮಗಳ ಯೋಜನೆಗಳನ್ನು ಹೊರತುಪಡಿಸಿ, ಹಿಂದುಳಿದ ವರ್ಗಗಳಿಗೆ ಸೇರಿದ ಮಡಿವಾಳ ಜನಾಂಗದವರು ಧೋಬಿ ವೃತ್ತಿ, ಸವಿತ ಸಮಾಜದ ಜಾತಿಗಳಿಗೆ ಸೇರಿದವರು

ಕ್ಷೌರಿಕ ವೃತ್ತಿ, ಬ್ಯೂಟಿಷಿಯನ್, ನಾದಸ್ವರ ವೃತ್ತಿಗಳು, ಬೆಸ್ತ ಸಮುದಾಯದವರು ಮೀನುಗಾರಿಕೆ ವೃತ್ತಿ, ಕುರುಬ ಸಮುದಾಯವರು ಕುರಿ ಸಾಕಾಣಿಕೆ, ಕಂಬಳಿ ನೇಯ್ಗೆ, ದೇವಾಂಗ ಸಮುದಾಯದವರು ನೇಕಾರಿಕೆ ವೃತ್ತಿಯಲ್ಲಿ ತೊಡಗಿಸಿಕೊಳ್ಳಲು ಸ್ವಯಂ ಉದ್ಯೋಗ ಸಾಲ ಯೋಜನೆಯಡಿ ಸಾಲ ಪಡೆಯುವ ಮೂಲಕ ತಮ್ಮ ಕುಲ ಕಸುಬುಗಳನ್ನು ಕೈಗೊಳ್ಳುತ್ತಿರುತ್ತಾರೆ. ಹಿಂದುಳಿದ ವರ್ಗಗಳಿಗೆ ಸೇರಿದ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಎಲ್ಲಾ ನಿಗಮಗಳಿಂದ ಗಂಗಾ ಕಲ್ಯಾಣ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ವ್ಯವಸಾಯ ವೃತ್ತಿಯನ್ನು ಕೈಗೊಳ್ಳಲು ಸಹ ಪ್ರೋತ್ಸಾಹ ನೀಡಲಾಗುತ್ತಿದೆ.

ಈ ಎಲ್ಲಾ ಯೋಜನೆಗಳಲ್ಲಿ ಸೌಲಭ್ಯವನ್ನು ಪಡೆದು ಹಿಂದುಳಿದ ವರ್ಗಗಳಿಗೆ ಸೇರಿದ ಜನರು ತಮ್ಮ ಜಾತಿಗಳ ಕುಲ ಕಸುಬುಗಳನ್ನು ಮುಂದುವರೆಸಲು ಅವಕಾಶ ಕಲ್ಪಿಸಲಾಗಿತ್ತಿದೆ.

**ಸಂಖ್ಯೆ:ಹಿಂವಕ 239 ಬಿಂಎಂಎಸ್ 2026**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು